# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2378 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ |
| ಉತ್ತರಿಸಬೇಕಾದ ದಿನಾಂಕ | : | 22.03.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ (ಮಂಗಳೂರು) ಮಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ಸಂಗ್ರಹಣಾ ಪ್ರದೇಶದಲ್ಲಿ ಅನಾಹುತದಿಂದ ನೊಂದ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ; | ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪಚ್ಚನಾಡಿ ಮತ್ತು ಕುಡುಪು ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣಾ ಲ್ಯಾಂಡ್‌ಫಿಲ್ ಘಟಕ ಪ್ರದೇಶದಲ್ಲಿ ಸುರಿದ ವಿಪರೀತ ಮಳೆಯಿಂದ ಪ್ರಕೃತಿ ವಿಕೋಪವಾಗಿ ಘನತ್ಯಾಜ್ಯ ರಾಶಿ ಸ್ಥಳದ ಭೂಕುಸಿತದ ಕಾರಣದಿಂದ 45 ಕುಟುಂಬಗಳ ಆಸ್ತಿಪಾಸ್ತಿಗಳಿಗೆ ಹಾನಿಯುಂಟಾಗಿರುತ್ತದೆ. ಸದರಿ ಅನಾಹುತದಲ್ಲಿ ಹಾನಿಗೊಳಗಾದ ಒಟ್ಟು 17.24 ಎಕರೆ ಜಮೀನನ್ನು ಭೂಸ್ವಾಧೀನಗೊಳಿಸಲು ಹಾಗೂ ಸಂತ್ರಸ್ಥರ ಕುಟುಂಬಗಳ ಪುನರ್ವಸತಿಗಾಗಿ ಸರ್ಕಾರ ಆದೇಶ ಸಂಖ್ಯೆ: ನಇ 293 ಎಸ್‌ಎಫ್ ಸಿ 2019, ದಿನಾಂಕ: 20.01.2020 ರನ್ವಯ ರೂ.22 ಕೋಟಿಗಳ ಪರಿಹಾರವನ್ನು ಮಂಜೂರು ಮಾಡಲಾಗಿದೆ.<br>ಏತನ್ಮಧ್ಯೆ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ 9367 / 2020 ರಲ್ಲಿನ ಮಧ್ಯಂತರ ಆದೇಶದನ್ವಯ ಒಟ್ಟು 45 ಕುಟುಂಬಗಳ ಪೈಕಿ 39 ಕುಟುಂಬಗಳಿಗೆ ರೂ.18,53,52,705/-ಗಳ ಪರಿಹಾರವನ್ನು ನೀಡಲಾಗಿದೆ. ಉಳಿದ 5 ಕುಟುಂಬಗಳಿಗೆ ಸಂಬಂಧಿಸಿದ ಜಮೀನುಗಳ ಕಂದಾಯ ದಾಖಲೆಗಳು ಹಾಗೂ ಭೂದಾಖಲೆಗಳು ಒಂದಕ್ಕೊಂದು ತಾಳೆಯಾಗದಿರುವ ಕಾರಣ ಹಾಗೂ 1 ಕುಟುಂಬಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯವಿರುವುದರಿಂದ ಸದರಿ ಕುಟುಂಬಗಳ ಪರಿಹಾರವನ್ನು ಪ್ರಸ್ತುತ ತಡೆಹಿಡಿಯಲಾಗಿದೆ. |
| ಆ) | ಮಂಗಳೂರಿನ ಪಚ್ಚನಾಡಿ ಘನತ್ಯಾಜ್ಯ ಭೂಭರ್ತಿ ಘಟಕದಲ್ಲಿ ಸಂಗ್ರಹವಾಗಿರುವ ಘನತ್ಯಾಜ್ಯ ಸ್ಥಳಾಂತರಿಸುವ ಕುರಿತು ಹೈಕೋರ್ಟ್ ಸೂಚನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ರಿಟ್ ಅರ್ಜಿ ಸಂಖ್ಯೆ 9367 / 2020 ರಲ್ಲಿನ ದೈನಂದಿನ ಆದೇಶದನ್ವಯ ಈಗಾಗಲೇ ಪಚ್ಚನಾಡಿ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಇರುವ ಪಾರಂಪರಿಕ ತ್ಯಾಜ್ಯವನ್ನು ಸಂಸ್ಕರಿಸಿ, ವಿಲೇಗೊಳಿಸಲು ಟೆಂಡರ್ ಮೂಲಕ ಬಿಡ್‌ದಾರರನ್ನು ಆಯ್ಕೆ ಮಾಡಿ, ಸರ್ಕಾರದ ಆದೇಶ ಸಂಖ್ಯೆ : ನಅಇ 7 ಎಂಎಂಸಿ 2020 (ಭಾಗ-1) ದಿನಾಂಕ:07.03.2022 ರನ್ವಯ ನೀಡಲಾದ ಅನುಮೋದನೆಯಂತೆ ಪಾಲಿಕೆ ವತಿಯಿಂದ ಬಿಡ್‌ದಾರರಿಗೆ ಕಾರ್ಯಾದೇಶವನ್ನು ನೀಡಲಾಗಿದ್ದು, ಪಾರಂಪರಿಕ ತ್ಯಾಜ್ಯವನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಇ) | ಬಂದಿದ್ದಲ್ಲಿ, ಈ ಕೂಡಲೇ ಘನತ್ಯಾಜ್ಯ ವಿಲೇವಾರಿಗೆ ಸರ್ಕಾರವು ಕ್ರಮವಹಿಸುವುದೇ? | |

ನಅಇ 19 ಎಂಎಂಸಿ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು